ಬಗ್ಗೆ ಮೈದುಂಬಿ ಮಾತಾಡುತ್ತಿರುವುದರ ಇಂಗಿತ ಇಷ್ಟೊತ್ತಿಗಾಗಲೇ ಹೊಳೆದಿರಬಹುದು: ಲೋಹಿಯಾರ ಕೃಷ್ಣಕಥನ ತಮ್ಮ ವ್ಯಕ್ತಿತ್ವ, ಒಳಲೋಕ ಹಾಗೂ ರಾಜಕಾರಣಗಳ ಅರ್ಥ ಹಾಗೂ ಎಲ್ಲೆಗಳನ್ನು ಹಿಗ್ಗಿಸಿಕೊಳ್ಳಲು ಭಾರತದ ಅನನ್ಯ ಚಿಂತಕ–ರಾಜಕಾರಣಿಯೊಬ್ಬ ನಡೆಸಿರುವ ಸಂಸ್ಕೃತಿ ಪಯಣದಂತಿದೆ! ಯಾವುದೇ ಪಾತ್ರವನ್ನು ಮೈದುಂಬಿ ಬಣ್ಣಿಸುವ ದೊಡ್ಡ ಲೇಖಕನೊಬ್ಬ ಆ ಪಾತ್ರವನ್ನು ತನ್ನ ವಿಸ್ತರಣೆಯಾಗಿ ನೋಡುವುದು ಸಹಜ.

ಲೋಹಿಯಾ ಮನಸ್ಸು ಕೃಷ್ಣನ ವ್ಯಕ್ತಿತ್ವದಲ್ಲಷ್ಟೇ ಮುಳುಗಿ ಸುಮ್ಮನಾಗುವುದಿಲ್ಲ; ಅದು ಖಂಡಾಂತರಗಳಿಗೆ ಚಾಚಿಕೊಳ್ಳುತ್ತದೆ; ಏಸುಕ್ರಿಸ್ತನತ್ತಲೂ ತಿರುಗುತ್ತದೆ:

‘ಕೃಷ್ಣನ ಹಾಗೆಯೇ ಮನುಷ್ಯನಾಗಲು ಪ್ರಯತ್ನಿಸಿದ ಇನ್ನೊಬ್ಬ ದೇವತೆ ನನ್ನ ಕಣ್ಣೆದುರು ಸುಳಿಯುತ್ತಾನೆ... ಅವನು ಬಡ ಬಡಗಿಯ ಮಗನಾಗಿದ್ದ; ಅವನ ಬದುಕಿನಲ್ಲಿ ವೈಭವ, ಶ್ರೀಮಂತಿಕೆಗಳಿರಲಿಲ್ಲ. ಜನರನ್ನು ರಕ್ಷಿಸುವ ಸಲುವಾಗಿ ಅವನು ಕೈಗೊಂಡ ಕೆಲಸ ಹೇಗಿತ್ತೆಂದರೆ ಕೃಷ್ಣನಿಗಾದಂತೆ ಅವನ ಬೆರಳಿಗೆ ಮಾತ್ರ ನೋವುಂಟಾಗಲಿಲ್ಲ, ಅವನ ಮೈಯ ರೋಮರೋಮವೂ ತತ್ತರಿಸಿತು. ಅವಯವಗಳು ಒಡೆದು ಚೂರಾಗಿ ಅವನು ಸತ್ತ. ಈಗಲೂ ಜನ ಅವನನ್ನು ನೆನಸಿಕೊಂಡು ತಮ್ಮ ಮೈಗೆ ಕಟ್ಟುವ ತೊಗಲನ್ನು ಹೊರಗೆಳೆದು ದುಃಖ ವ್ಯಕ್ತಪಡಿಸಲು ಹೋಗುತ್ತಾರೆ.’

ಗಾಂಧೀಜಿ ತೀರಿಕೊಂಡಾಗ ಲೋಹಿಯಾ ಬರೆದ ಮಾತು ಮತ್ತೆ ನೆನಪಾಗುತ್ತದೆ: ‘ಯೇಸು ಕ್ರಿಸ್ತ ಪ್ರೀತಿ ಮತ್ತು ಅಹಿಂಸೆಯ ಶ್ರೇಷ್ಠ ಗುರು ಇರಬಹುದು. ಆದರೆ ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ಪ್ರೀತಿ, ಅಹಿಂಸೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಗಾಂಧಿ ಈ ಗುಣಗಳಿಗೆ ಸಂಕೇತವಾಗಿದ್ದರು. ಕ್ರಿಸ್ತನಿಗೆ ತನ್ನ ಜೀವಿತಕಾಲದಲ್ಲಿ ಇದು ಸಾಧ್ಯವಾಗಲಿಲ್ಲ.’

ಲೋಹಿಯಾ ಪುರಾಣ, ಚರಿತ್ರೆಗಳ ಪಾತ್ರಗಳನ್ನು ಚರ್ಚಿಸುವಾಗ ಸಮಕಾಲೀನ ರಾಜಕೀಯ ಪಾತ್ರಗಳು ಬಂದು ಕೂಡಿಕೊಳ್ಳುತ್ತವೆ. ಕೃಷ್ಣನ ಜಾಡನ್ನು ಅಳೆಯಲು ಹೊರಟ ಲೋಹಿಯಾಗೆ ಕೃಷ್ಣ ಪೂರ್ವ–ಪಶ್ಚಿಮಗಳನ್ನು ಒಂದುಗೂಡಿಸಿದ ಬಗೆ; ರಾಮ ಉತ್ತರ–ದಕ್ಷಿಣಗಳನ್ನು ಒಂದುಗೂಡಿಸಿದ ಬಗೆ, ಇವೆಲ್ಲ ಕಣ್ಮುಂದೆ ಬರುತ್ತದೆ. ಭಾರತವನ್ನು ಒಂದುಗೂಡಿಸುವುದು ಲೋಹಿಯಾರ ಸಮಾಜವಾದಿ ರಾಜಕಾರಣದ ಹುಡುಕಾಟವೂ ಆಗಿತ್ತು.

ಯಾವುದೇ ಧೀಮಂತ ಚಿಂತಕನ ಹುಡುಕಾಟ ಅಖಂಡವಾಗಿರುತ್ತದೆ; ಅವನ ಒಂದು ಬಗೆಯ ಗಂಭೀರ ಚಿಂತನೆ ಉಳಿದ ಚಿಂತನಾವಲಯಗಳಿಗೂ ಚಾಚಿಕೊಳ್ಳುತ್ತದೆ. ಲೋಹಿಯಾರ ಕೃಷ್ಣ ಜಾಡಿನ ಹುಡುಕಾಟದಲ್ಲಿ ಸದ್ಯದ ರಾಜಕೀಯ ಹುಡುಕಾಟ ಬೆರೆಯತೊಡಗುತ್ತದೆ; ಜಾತಿ, ಭಾಷೆ, ಧರ್ಮಗಳ ಆಧಾರದ ಮೇಲೆ ಹೋಳಾಗಿದ್ದ ಭಾರತವನ್ನು ಸಮಾಜವಾದಿ ರಾಜಕಾರಣ ಒಂದುಗೂಡಿಸಬೇಕೆಂಬ ಗುರಿಯೂ ಸೇರಿಕೊಳ್ಳುತ್ತದೆ. ಧರ್ಮ, ರಾಜಕಾರಣಗಳ ಸಂಬಂಧ ಲೋಹಿಯಾಗೆ ಅರಿವಾಗತೊಡಗುತ್ತದೆ:

‘ಹಾಗೆ ನೋಡಿದರೆ ಎಲ್ಲ ಧರ್ಮಗಳ ಹುಟ್ಟಿನ ಹಿನ್ನೆಲೆಯಲ್ಲೂ ರಾಜಕಾರಣ ಇರುವುದು ಕಾಣುತ್ತದೆ. ದೂರ ಚದುರಿದ ಸಜ್ಜನರನ್ನು ಒಂದುಗೂಡಿಸುವುದು, ಕಲಹವನ್ನು ದೂರ ಮಾಡುವುದು, ಸಂಧಿ ಏರ್ಪಡಿಸುವುದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲ ಇತಿಮಿತಿಗಳನ್ನು ತೊಡೆದು ಹಾಕುವುದು ಧರ್ಮದ ಉದ್ದೇಶವಿರಬಹುದು. ಹಾಗೆಯೇ ಸದಾಚಾರ ಹಾಗೂ ಆತ್ಮಚಿಂತನೆಯ ದೃಷ್ಟಿಯಿಂದ ಬದುಕನ್ನು ಕೊಂಚ ಮೇಲ್ಮಟ್ಟಕ್ಕೆ ಕೊಂಡೊಯ್ಯಲು ಪ್ರಯತ್ನಿಸುವುದು ಕೂಡ ಧರ್ಮದ ಆಶಯ ಅನ್ನಿಸುತ್ತದೆ.’

ಈ ಮಾತುಗಳನ್ನು ಬರೆಯುವ ಕಾಲದಲ್ಲಿ, ಅದೇ ಆಗ ಸೋತಿದ್ದ ಎರಡು ಸಮಾಜವಾದಿ ಪಕ್ಷಗಳನ್ನು, ಅದರೊಳಗಿರುವ ಸಜ್ಜನರನ್ನು ಒಗ್ಗೂಡಿಸುವ ಯೋಚನೆ ಲೋಹಿಯಾ ಮನಸ್ಸಿನಲ್ಲಿ ಸುಳಿದಿದ್ದರೆ ಅಚ್ಚರಿಯಿಲ್ಲ. ‘ಧರ್ಮ ಅಲ್ಪಕಾಲದ ರಾಜಕಾರಣ; ರಾಜಕಾರಣ ದೀರ್ಘ ಕಾಲದ ಧರ್ಮ’ ಎಂದು ಲೋಹಿಯಾ ಆಗಾಗ ಹೇಳುತ್ತಿದ್ದರು. ಎಲ್ಲ ಕಾಲದಲ್ಲೂ ಒಳ್ಳೆಯ ರಾಜಕಾರಣಿಗಳು ಅರ್ಥ ಮಾಡಿಕೊಳ್ಳಲೇಬೇಕಾದ ಮಾತು ಇದು.

ಲೋಹಿಯಾ ಈ ಥರದ ಮಾತುಗಳನ್ನು ರಮಾ ಜೊತೆ ಹಂಚಿಕೊಳ್ಳುತ್ತಿರುವ ಅಥವಾ ಬರೆಯುತ್ತಿರುವ ಕಾಲವನ್ನು ನೆನಪಿಸಿಕೊಳ್ಳಿ: ಆಗಿನ್ನೂ ಲೋಹಿಯಾ ಚಾಕಿಯಾ ಚಂದೌಲಿ ಲೋಕಸಭಾ ಕ್ಷೇತ್ರದಲ್ಲಿ ಸೋತಿದ್ದರು; ರಮಾ ರೇವಾ ಕ್ಷೇತ್ರದಲ್ಲಿ ಸೋತಿದ್ದರು. ಅದು ಸೋಲಿನ ಆತ್ಮಾವಲೋಕನದ ಕಾಲ. ಆ ಚುನಾವಣೆಯಲ್ಲಿ ಸಮಾಜವಾದಿ ಪಕ್ಷ ಹಾಗೂ ಪ್ರಜಾ ಸಮಾಜವಾದಿ ಪಕ್ಷಗಳಿಗೆ ಬಂದ ಒಟ್ಟಾರೆ ಮತಗಳು ಶೇಕಡ 12.4. ಆದರೆ ಈ ಮತಗಳು ಎರಡೂ ಪಕ್ಷಗಳಲ್ಲಿ ಹಂಚಿಹೋಗಿದ್ದವು.

ಇದೇ ಚುನಾವಣೆಯಲ್ಲಿ ಗೋಪಾಲಗೌಡರ ಕ್ಷೇತ್ರದಲ್ಲಿ ಲೋಹಿಯಾ ಮಾಡಿದ ಭಾಷಣ ಕೂಡ ಗೌಡರ ಸೋಲಿಗೆ ಒಂದು ಕಾರಣವಾದದ್ದು ತಮಾಷೆಯಾಗಿದೆ. ಈ ಕುರಿತು ಶಾಮ ಐತಾಳ ಬರೆಯುತ್ತಾರೆ:

ಚುನಾವಣಾ ಭಾಷಣದಲ್ಲಿ ಲೋಹಿಯಾ ಜನರನ್ನು ಕೇಳಿದರು: ‘ಗೋಪಾಲಗೌಡರು ರೈತರು, ಕೂಲಿಕಾರರು, ಶ್ರೀಸಾಮಾನ್ಯರ ಬಗ್ಗೆ ಏನು ಹೋರಾಟ ಮಾಡಿದ್ದಾರೆಂದು ವಿಚಾರಿಸಿಕೊಂಡಿದ್ದೀರಾ? ರೈತರ ಬೇಡಿಕೆಗಳ ಬಗ್ಗೆ ಎಷ್ಟು ಸಲ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಿದ್ದಾರೆ? ವಿಚಾರಿಸಿಕೊಂಡಿದ್ದೀರಾ?’

ಗೌಡರು ಮೌನವಾಗಿದ್ದರು. ಹಳ್ಳಿಯ ಮುಗ್ಧ ಜನ ರಸ ಬಿಟ್ಟು ಕಸ ಹಿಡಿದುಕೊಂಡರು. ಎದುರಾಳಿ ಕಾಂಗ್ರೆಸ್ಸಿಗರಿಗೆ ಗೌಡರನ್ನು ಹಣಿಯಲು ಲೋಹಿಯಾ ಮಾತೇ ಅಸ್ತ್ರವಾಯಿತು. ತಮ್ಮ ಚುನಾವಣಾ ವಿಮರ್ಶಾ ಭಾಷಣ ಶಿಷ್ಯನಿಗೆ ತಿರುಗುಬಾಣವಾಗಿದ್ದು ಲೋಹಿಯಾಗೆ ತಿಳಿದಂತಿರಲಿಲ್ಲ!

ಆಗ ಜೆ.ಪಿ. ಕೋರಿಕೆಯಂತೆ ಲೋಹಿಯಾ ಲಕ್ನೋಗೆ ಬಂದರು; ಸೋತ ಎರಡೂ ಪಕ್ಷಗಳನ್ನು ಒಗ್ಗೂಡಿಸಬೇಕು ಎಂದ ಜೆ.ಪಿಗೆ ಲೋಹಿಯಾ ಹೇಳಿದರು: ‘ನೀವು ಪಕ್ಷವನ್ನು ಮುನ್ನಡೆಸುವುದಾದರೆ ಸರಿ; ನನಗೆ ಈ ಪುಟ್ಟ ಪಕ್ಷವನ್ನೇ ನಿಭಾಯಿಸುವುದು ಕಷ್ಟ; ದೊಡ್ಡ ಪಕ್ಷವನ್ನು ಮುನ್ನಡೆಸುವ ಶಕ್ತಿ ನನ್ನಲ್ಲಿಲ್ಲ.’

ಜೆ.ಪಿ.ಯ ಮನಸ್ಸು ಪಕ್ಷ ರಾಜಕಾರಣದಿಂದ ದೂರಾಗತೊಡಗಿತ್ತು. ಅವರು ಭೂದಾನ ಚಳುವಳಿಯ ಕಡೆಗೆ ನಡೆದಿದ್ದರು. ಆದರೂ ಎರಡೂ ಪಕ್ಷಗಳು ಒಟ್ಟಾಗುವ ಚರ್ಚೆ ಮುಂದುವರಿಯಿತು.

ಭಾರತದ ವಿರೋಧ ಪಕ್ಷಗಳ ರಾಜಕಾರಣದ ಈ ಪರಿಚಿತ ಮಾದರಿಯನ್ನು ಅಂದಿನಿಂದ ಇಂದಿನವರೆಗೂ ನೋಡುತ್ತಲೇ ಇದ್ದೇವೆ: ಚುನಾವಣೆಗೆ ಮೊದಲು ತಂತಮ್ಮ ಪಕ್ಷಗಳ ಸಾಧ್ಯತೆಯ ಬಗ್ಗೆ ಆತ್ಮವಿಶ್ವಾಸ ಹಾಗೂ ವಾಸ್ತವವನ್ನು ಅರಿಯದ ಆತ್ಮವಂಚನೆ; ಸೋಲಿನ ನಂತರ ಜ್ಞಾನೋದಯ! ಮನುಷ್ಯರಿಗೆ

## ಕಳೆದ ಸಂಚಿಕೆಯಲ್ಲಿ



ವಿಶ್ವ ಪ್ರವಾಸ ಮುಗಿಸಿ ಬಂದ ಲೋಹಿಯಾ ಸಮಾಜವಾದಿ ಪಕ್ಷಕ್ಕಾಗಿ ಗಟ್ಟಿ ತಾತ್ವಿಕತೆಯುಳ್ಳ ಕಾರ್ಯಕರ್ತರನ್ನು ರೂಪಿಸುವ ಕೆಲಸದಲ್ಲಿ ತೊಡಗಿಕೊಂಡರು. ಪ್ರಥಮ ಸಾರ್ವಜನಿಕ ಚುನಾವಣೆಯಲ್ಲಿ ಸ್ಪರ್ಧಿಸದೆ ಚುನಾವಣೆಯ ಕೆಲಸದಲ್ಲಿ ತೊಡಗಿಕೊಂಡರು. ಮೈಸೂರು ರಾಜ್ಯದಲ್ಲಿ ಶಾಂತವೇರಿ ಗೋಪಾಲಗೌಡರು ಸಾಗರ–ಹೊಸನಗರ ಕ್ಷೇತ್ರದಿಂದ ಚುನಾವಣೆಗೆ ನಿಂತರು. ‘ಒಂದು ನೋಟು; ಒಂದು ವೋಟು ಕೊಡಿ’ ಎನ್ನುವ ಅವರ ಕೋರಿಕೆಗೆ ಜನ ಸ್ಪಂದಿಸಿ ಗೋಪಾಲಗೌಡರು ಚುನಾಯಿತರಾದರು. ಬದಲಾದ ಸಂದರ್ಭದಲ್ಲಿ ‘ಪ್ರಜಾ ಸಮಾಜವಾದಿ ಪಕ್ಷ’ (ಪಿಎಸ್‌ಪಿ) ಅಸ್ತಿತ್ವಕ್ಕೆ ಬಂತು. ಇದೇ ಸಮಯದಲ್ಲಿ ಸಮಾಜ ಪರಿವರ್ತನೆಯಲ್ಲಿ ತೊಡಗಿದ್ದ ಅಂಬೇಡ್ಕರ್, ಲೋಹಿಯಾ ಗಮನಸೆಳೆದರು. ಅಂಬೇಡ್ಕರ್ ಚಿಂತನೆ–ವ್ಯಕ್ತಿತ್ವಗಳನ್ನು ಕುರಿತು ಲೋಹಿಯಾ ಚುನಾವಣಾ ಸಭೆಗಳಲ್ಲೂ ಮಾತಾಡತೊಡಗಿದ್ದರು. 1957ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಲೋಹಿಯಾ ಸೋತರು. ‘ಸಮಾಜವಾದಿ ಪಕ್ಷಕ್ಕಾಗಿ ಯುದ್ಧ ಮುಂದುವರಿಯಲೇಬೇಕು’ ಎಂದು ತಮ್ಮ ಗೆಳತಿ ರಮಾ ಮಿತ್ರರಿಗೆ ಬರೆದ ಪತ್ರದಲ್ಲಿ ಲೋಹಿಯಾ ಹೇಳಿದ್ದರು.